Janab J. MOHAMED IMAM.—'Registration' you have covered. 'General Administration' is most important. We are going to get important Demands like Irrigation, Medical, Police, etc.

Mr. SPEAKER.—As I have already pointed out, on previous occasions, only four days used to be allotted for this work. In fact even in the programme of business we find that one full day is set apart for 'General Administration'; and for the first time such a large number of days, that is, 10 days are allotted for voting of demands. I consider it quite sufficient. It is stated 'not less than 10 days' are to be allotted. The number of days has been increased from 4 to 10 days. We will take your suggestion into consideration next time. We have done very satisfactory progress today.

Election of Sri R. Chennigaramiah as Deputy Speaker.

Mr. SPEAKER.—Now I announce the result of the election of Deputy Speaker. Sri R. Chennigaramiah secures 72 votes. Sri M. Chikkalingiah secures 19 votes. I declare that Sri R. Chennigaramiah is duly elected as Deputy Speaker of the Assembly.

(Cheers).

Felicitations to Deputy Speaker.

Sri T. SIDDALINGAIYA (Minister for Industries).—Sir, I offer my heartiest congratulations to our dear friend Sri R. Chennigaramiah.

Janab J. MOHAMED IMAM (Jagalur).—When he is elected as Deputy Speaker, there is no question of 'Dear Friend'.

Sri T. SIDDALINGAIYA.—It is also a term of affection. Let us not exclude affection from the Legislative Assembly. There is nothing objectionable. I mentioned the name of my friend Sri R. Chennigaramiah. I think his name and himself are very dear to all of us. It is well known that he has always been a very straight forward gentleman. His sound commonsense, his balanced judgment and quick grasp of knowledge of things are well known. No better choice could have been made. He had a long political career. To crown it all he had an intimate knowledge of the administration of the State for over 4½ years. With his abilities I am sure he will be an asset to all of us in the execution of our task in this Assembly. On behalf of this House I welcome him and I congratulate him on his being elected as our Deputy Speaker.

ಶ್ರೀ ಎಂ. ಚಿಕ್ಕಲಿಂಗಯ್ಯನವರು (ಮಳವಳ್ಳಿ ಅನುಸೂಚಿತ ಜಾತಿಗಳು).—ಸ್ವಾಮಿ, ಈ ಶಾಸನಸಭೆಯ ಉಪಾಧ್ಯಕ್ಷಸ್ಥಾನಕ್ಕೆ ಶ್ರೀ ಆರ್. ಚೆನ್ನಿಗರಾಮಯ್ಯನವರು ಚುನಾಯಿತರಾಗಿ ಬಂದದ್ದು ನನಗೂ ಬಹಳ ಸಂತೋಷದ ವಿಷಯ. ಆದರೆ ಈ ಸಭಿಕರೆಲ್ಲರಿಗೂ ತಿಳಿದಿರುವಹಾಗೆ ನಾನು ಈ ಚುನಾವಣೆಗೆ ಒಂದು ತತ್ವದ ದೃಷ್ಟಿಯಿಂದ ನಿಂತೆನೇ ಏನಾ, ಈ ಚುನಾವಣೆಯಲ್ಲಿ ನನಗೆ ಜಯವಾಗುತ್ತೆಂಬ ಭರವಸೆ ನನಗಾಗಲಿ ಅಥವಾ ನಮ್ಮ ಪಕ್ಷದವರಿಗಾಗಲಿ ಇರಲಿಲ್ಲ. ನನ್ನ ಸೋಲಿನ ವಿಷಯ ಈ ಮೊದಲೇ ನನಗೂ, ನಮ್ಮ ಪಾರ್ಟಿಯವರಿಗೂ ಗೊತ್ತಿತ್ತು. ಆದರೆ ಈ ಸಭೆಗೆ ಅಧ್ಯಕ್ಷರ ಚುನಾವಣೆಯಾದ ದಿವಸನೇ, ಈ ಸಭೆಯಲ್ಲಿ ನಮ್ಮ ನಾಯಕರು ತಿಳಿಸಿದಂತೆ ಹಾಗೆ, ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೂ ಸಹ ಇಂಥ ವಿಚಾರಗಳಲ್ಲಿ ಒಂದು ಸತ್ಸಂಪ್ರದಾಯವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಆ ಸಂಪ್ರದಾಯವೇನೆಂದರೆ, ಯಾವಾಗ ಒಂದು ಪಕ್ಷದವರು ಅಧ್ಯಕ್ಷಸ್ಥಾನಕ್ಕೆ ಆರಿಸಿಬರುತ್ತಾರೋ, ಆಗ ಅವರು ಆ ಸಭೆಯ ಉಪಾಧ್ಯಕ್ಷಸ್ಥಾನವನ್ನು ಅವರ ಎದುರುಪಕ್ಷದವರಿಗೆ ಬಿಟ್ಟುಕೊಡತಕ್ಕದ್ದೇ ಆಗಿದೆ. ಇಲ್ಲಿಯೂ ಸಹ ಅದೇ ರೀತಿ ಮಾಡತಕ್ಕದ್ದು ಸೂಕ್ತ ಎಂದು ನಾನು.....

ಶ್ರೀ ಎ. ಭೀಮಪ್ಪನಾಯಕರು (ಪೊಳಕಾಲ್ಮುರು).—ಇಂಥ ಒಂದು ಪದ್ಧತಿ ಅದು ಯಾವ ದೇಶದಲ್ಲಿದೆಯೋ ನನಗೆ ಗೊತ್ತಾಗಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯನವರು.—ನಾನು ಸ್ಪರ್ಧಿಸಿದ್ದ ಚುನಾವಣೆಯಲ್ಲಿ ಈ ದಿವಸ ನನಗೆ ಉಂಟಾಗಿರುವ ನನ್ನ ಸೋಲನ್ನು ನಾನು ಸಂತೋಷದಿಂದ ಒಪ್ಪಿಕೊಂಡಿದ್ದೇನೆ. ನನಗೆ ಈ 19 ಓಟುಗಳು ಈ ದಿವಸ ಬಂದಿರುವುದು ಒಂದು ಸಂತೋಷದ ಸಂಗತಿಯೇ ಸರಿ. ಏತಕ್ಕೆಂದರೆ ಇದು ದಿನೇ ದಿನೇ ನಮ್ಮ ಪಕ್ಷಕ್ಕೆ ಉತ್ತೇಜನ ಹೇಗೆ ಹೆಚ್ಚಾಗುತ್ತಿದೆ ಎಂಬುದನ್ನು ಸೂಚಿಸುತ್ತಿದೆ. ಆದರೆ ನಮ್ಮ ಪಕ್ಷದಲ್ಲಿರತಕ್ಕ 3–4 ಜನ ಸದಸ್ಯರುಗಳು ಈ ದಿವಸ ಸಭೆಗೆ ಬಾರದೆ ನಿಂತುಹೋಗಿದ್ದಾರೆ. ಅವರೆಲ್ಲರೂ ಈ ದಿವಸ ಇಲ್ಲಿ ಹಾಜರಿದ್ದಿದ್ದರೆ ಅವರ ಓಟುಗಳೆಲ್ಲವೂ ನನಗೇ ಬರುತ್ತಿದ್ದವೆಂಬ ನಂಬಿಕೆಯೂ ನನಗಿತ್ತು.

ಆದರೆ ಈ ದಿವಸ ಈ ಉಪಾಧ್ಯಕ್ಷಸ್ಥಾನಕ್ಕೆ ಚುನಾಯಿತರಾಗಿ ಬಂದಿರತಕ್ಕ ಶ್ರೀಮಾನ್ ಆರ್. ಚೆನ್ನಿಗರಾಮಯ್ಯನವರು ನನಗೆ ಕೇವಲ ಆಪ್ತ ಸ್ನೇಹಿತರು. ಬಹಳ ದಿವಸಗಳಿಂದಲೂ ಅವರ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ಆದಾಗ್ಯೂ ಅವರ ಗುಣಗಾನಮಾಡತಕ್ಕ ವಿಚಾರಕ್ಕೆ ನಾನು ಪ್ರವೇಶಿಸದೆ ಅದನ್ನು ನನ್ನ ಇತರ ಮಿತ್ರರಿಗೇ ಬಿಟ್ಟಿದ್ದೇನೆ. ಈ ಉಪಾಧ್ಯಕ್ಷ ಸ್ಥಾನಕ್ಕೆ ಅವರನ್ನು ನಾನು ಸ್ವಾಗತಿಸುತ್ತೇನೆ.

Janab J. MOHAMED IMAM.—Sir, in associating myself with the previous speaker and the Minister in charge of Industries, in offering congratulations to my friend and dear friend Sri Chennigaramiah...

Sri H. SIDDAVEERAPPA.—You took objection for the use of the very same word.

Janab J. MOHAMED IMAM.—A ruling was given. I must also take this opportunity to congratulate my friend Sri M. Chickalingiah on his courage of conviction and for having stood against a mighty rival who has been backed up . . . .

ಶ್ರೀ ಎಚ್. ಕೆ. ಸಿದ್ದಯ್ಯನವರು (ಬೇಲೂರು ಅನುಸೂಚಿತ ಜಾತಿಗಳು).—ಸ್ವಾಮಿ, ನಾನೊಂದು ಕ್ರಿಯಾರೋಪವನ್ನು ಸೂಚಿಸುತ್ತೇನೆ. ಈಗ ಮಾತ ನಾಡುತ್ತಿರುವ ಮಾನ್ಯ ಸದಸ್ಯರಿಗೆ ಕನ್ನಡ ಚೆನ್ನಾಗಿ ಬರುತ್ತದೆ. ಆದರೂ ಅವರು ಇಂಗ್ಲೀಷಿನಲ್ಲೇ ಭಾಷಣ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಆಗಲಿ; ತಾವು ಕುಳಿತುಕೊಳ್ಳಿ. ತಮ್ಮ ಭಾಷಣವನ್ನು ತಾವು ಕನ್ನಡದಲ್ಲೇ ಮಾಡುವಿರಂತೆ.

Janab J. MOHAMED IMAM.— . . . for having stood against a big majority and just to vindicate a principle which in his opinion ought to be adopted in this House. I also agree with him that for such important posts of Speakership and Deputy Speakership, healthy traditions must be built up and that the procedure we adopt and the way by which we hold the elections must be such as to win the confidence of all the persons in this House and I have already stated on the occasion of the election of the Speaker, what the procedure adopted in England and other countries is where democracy has proved a success. Here we are in the beginning; we are just trying an experiment in democracy and we are interested in the success of democracy. So it is necessary on our part and as the pioneers of this democratic Government, to build up healthy traditions and to see that democracy is a success. And in my opinion democracy will not be a success unless in important affairs, in important elections, these party issues are given up; party issues are something else. But, in all such matters, it is necessary that we build up healthy traditions for the sake of posterity. No doubt we have built up some traditions now but may or may not be acceptable in future. What is the tradition we have built up so far? We have built the tradition that the choice of Speakership lies in the hands of the majority party which is guided by the executive. That is number one. Next, it is followed by another tradition that an Ex-Minister who was immediately before in office could be elected as a Deputy Speaker. These are precedents which I do not know whether posterity or our successors will follow or not. It is to protest against this policy and to point out that in all such circumstances the entire House must come to an unanimous understanding, that this party set up one of its candidates as a token protest just as we are moving token cut motions. We have nothing against him personally. For the sake of principle and for the sake of democracy, we have to adopt this course. Anyhow I congratulate Sri R. Chennigaramiah. It is very good of him that after being a Minister he should have condescended to be elected as a Deputy Speaker. I wish him every success. I am glad that he has been elected and I am sure that he would, while conducting the deliberations of the House, conduct himself in a fair and just manner to those on the opposite side also.

ಶ್ರೀ ಎಸ್. ಸಿದ್ದಪ್ಪನವರು (ಮಾಗಡಿ).—ಸ್ವಾಮಿ, ಈ ದಿವಸ ಈ ಸಭೆಯು ಉಪಾಧ್ಯಕ್ಷರಾಗಿ ಹಿಂದಿನ ಮಂತ್ರಿಗಳಾಗಿದ್ದಂಥ ಶ್ರೀ ಆರ್. ಚೆನ್ನಿಗರಾಮಯ್ಯನವರು ಬಹುಮತದಿಂದ ಚುನಾಯಿತರಾಗಿದ್ದಾರೆ. ಬಹುಮತ ಎಂಬ ಅಭಿಪ್ರಾಯವನ್ನು ಸೂಚಿಸುವುದೇಕೆಂದರೆ ಎದುರು ಪಕ್ಷದವರೂ ಕೂಡ ಅವರ ವಿಷಯದಲ್ಲಿ ಮೆಚ್ಚುಗೆಯ ಮಾತನ್ನಾಡಿದ್ದಾರೆ; ಅವರ ದಕ್ಷತೆ ವಿಷಯದಲ್ಲಿ ಅವರ ಎದುರಾಳಿಗಳಾಗಿ ನಿಂತಿದ್ದ ಶ್ರೀ ಚಿಕ್ಕಲಿಂಗಯ್ಯನವರು ಮತ್ತು ಈ ಸಭೆಯ ಎದುರುಪಕ್ಷದ ನಾಯಕರಾದ ಜನಾಬ್ ಇಮಾಂರವರು ಕೂಡ ಬಹಳ ಶ್ಲಾಘನೀಯವಾದ ರೀತಿಯಲ್ಲಿ ಅವರನ್ನು ಗೌರವಿಸಿದ್ದಾರೆ. ಅದ್ದರಿಂದ ನಾನು ಬಹುಮತ ಎಂಬ ಪದವನ್ನು ಉಪಯೋಗಿಸಿರುವುದು ತಪ್ಪಾಗಲಾರದೆಂದು ತಿಳಿದುಕೊಂಡಿದ್ದೇನೆ. ಈ ಸಭೆಯ ಗೌರವ ಮತ್ತು ಘನತೆಗಳಿಗೆ ಸರಿಯಾದ ಉಪಾಧ್ಯಕ್ಷರನ್ನು ಚುನಾಯಿಸಿದ್ದೇವೆಂದು ಮನಸ್ಸಾಕ್ಷಿಯಾಗಿ ಅಭಿನಂದಿಸುತ್ತೇನೆ. ಇಂದಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಹಿಂದಿನ ಮಂತ್ರಿಮಂಡಲದಲ್ಲಿದ್ದರು. ಕಾವೇರಿನದಿಯು ಶ್ರೀರಂಗಪಟ್ಟಣದಿಂದ ಬಹುದೂರ ಹೋಗಿ ಹೇಗೆ ಜನರಿಗೆ ಸೌಕರ್ಯ ಕಲ್ಪಿಸಿ ಸುಖಮಯವನ್ನಾಗಿ ಮಾಡಿದೆಯೋ ಅದೇರೀತಿಯಲ್ಲಿ ಈಗ ಚುನಾಯಿತರಾಗಿರುವವರ ಹೆಸರನ್ನು ಕೇಳಿದರೆ ಬಹಳ ಸಂತೋಷವುಂಟಾಗುತ್ತಿದೆ ಎಂದು ಸೂಚಿಸಿ ಈ ಸಭೆಯ ಮೂಲಕ ಮಾನ್ಯ ಉಪಾಧ್ಯಕ್ಷರನ್ನು ವಂದಿಸುತ್ತೇನೆ. ಅವರು ಬಹಳ ಕಾಲದಿಂದಲೂ ಪ್ರಜಾಪ್ರತಿ

ನಿಧಿ ಸಭೆ, ಜಿಲ್ಲಾಬೋರ್ಡು ಮತ್ತು ಇನ್ನೂ ಅನೇಕ ಸಣ್ಣ ಸಣ್ಣ ಸಂಸ್ಥೆಗಳಲ್ಲೂ ಬಹಳ ಪ್ರಾಮುಖ್ಯವಾಗಿ ವಿದ್ಯಾ ಇಲಾಖೆಯಲ್ಲಿ ಮಂತ್ರಿಗಳಾಗಿದ್ದೂ ದೇಶಕ್ಕೆ ಸಲ್ಲಿಸಿರುವ ಸೇವೆಯನ್ನು ಒಂದಲ್ಲ ಒಂದು ಕಡೆ ನಾನು ನೋಡಿದ್ದೇನೆ. ಅಂಥ ಮಹನೀಯರು ಉಪಾಧ್ಯಕ್ಷರಾಗಿ ಚುನಾಯಿಸಿ ಬಂದಿರುವುದರಿಂದ ಮತ್ತೊಮ್ಮೆ ಅವರನ್ನು ವಿಶ್ವಾಸದಿಂದ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ.

*ಶ್ರೀ ಎಂ. ಶಂಕರಲಿಂಗೇಗೌಡರು (ನಾಗಮಂಗಲ)—ಸ್ವಾಮಿ, ಈ ದಿವಸ ಚುನಾವಣೆಯಾಗುತ್ತದೆಯೆಂಬುದು ಒಬ್ಬರಿಗೂ ಗೊತ್ತಾಗಲೇ ಇಲ್ಲ. ಒಬ್ಬೊಬ್ಬರೇ ಹೋಗಿ ಓಟು ಕೊಟ್ಟರು. ಆದರೆ ಮಾಜಿ ಮಂತ್ರಿಗಳು ಅಧ್ಯಕ್ಷರಾಗಬಾರದು, ಉಪಾಧ್ಯಕ್ಷರಾಗಬಾರದು ಎಂದು ಹೇಳುತ್ತಾರೆ. ಹಿಂದೆ ಯಾರೋ ಒಬ್ಬರು ಮಂತ್ರಿಗಳಾಗಿದ್ದು ಅನಂತರ ಅಧ್ಯಕ್ಷರಾಗಿದ್ದರು. ಆಗ ಅವರ ವಿಷಯದಲ್ಲಿ ಆಕ್ಷೇಪಿಸಿದರೋ ಇಲ್ಲವೋ ಗೊತ್ತಿಲ್ಲ. ಆಗ ಅವರನ್ನು ಆ ಸ್ಥಾನಕ್ಕೆ ಚುನಾಯಿಸಬಾರದೆಂದು ಮಹಾರಾಜರು ಹೇಳಬಹುದಾಗಿತ್ತು. ಈಗ ಈ ರೀತಿ ಮಾಜಿ ಮಂತ್ರಿಗಳಿಬ್ಬರು ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳಿಗೆ ಬಂದಿರುವುದರಲ್ಲಿ ಅರ್ಥ ಕಾಣುವುದಿಲ್ಲ. ಅಲ್ಲದೆ ಹರಿಜನರ ಪರವಾಗಿ ಅವರ ಅಭಿಪ್ರಾಯವನ್ನು ಸೂಚಿಸಲು ಉಪಾಧ್ಯಕ್ಷರಾಗಿ ಬಂದಿರಬಹುದು.

ಶ್ರೀ ಬಿ. ಹುಚ್ಚೇಗೌಡರು.—ಖಾನಗಿ ಮಹನೀಯರನ್ನೇ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹಿಂದೆ ಅಸೆಂಬ್ಲಿಯಲ್ಲಿ ನಿರ್ಣಯಮಾಡಿದ್ದಾರೆ.

ಶ್ರೀ ಎಂ. ಶಂಕರಲಿಂಗೇಗೌಡರು.—ಇದಕ್ಕೆ ಗುರುತಾಗಿ ನಾವು ಹಿಂದೆ ಖಂಡಿಸಿದ್ದೇವೆಂದು ಹೇಳುತ್ತಾರೆ. ಅವರಿಗೆ ಅಭಿನಂದನೆ ಕೊಡಬಹುದು. ಏಕೆಂದರೆ ಉಪಾಧ್ಯಕ್ಷರು ಅನೇಕ ದಿವಸ ಶಾಸನಸಭೆಗಳಲ್ಲಿ ಕೆಲಸಮಾಡಿದವರು. ಬಹಳ ಒಳ್ಳೆಯ ಹೆಸರು ತೆಗೆದುಕೊಂಡಿದ್ದಾರೆ. ಕಾಂಗ್ರೆಸ್ಸಿನವರು ಅವರಿಗೆ ಓಟುಕೊಟ್ಟರೆ ಬೇರೆಯವರು ಇನ್ನೊಬ್ಬರಿಗೆ ಓಟುಮಾಡಿರಬಹುದು. ಈಗ ಅವರಿಗಿರುವ ಹೆಚ್ಚಿನ ಜವಾಬ್ದಾರಿಯೇನೆಂದರೆ ಅಧ್ಯಕ್ಷರಿಲ್ಲದಿದ್ದಾಗ ಅವರ ಸ್ಥಾನದ ಭಾರ್ಜಿನಲ್ಲರುತ್ತಾರೆ, ಆಗ ಅವರು ಪಕ್ಷಪಾತವನ್ನು ತೋರಿಸದೆ ಎಲ್ಲರಲ್ಲೂ ಒಂದೇ ತರಹ ಭಾವನೆಯಿಂದ ವರ್ತಿಸಬೇಕೆಂಬುದನ್ನು ಗಮನದಲ್ಲಿಡಬೇಕು. ಅವರು ಹಿಂದೆ ಮಂತ್ರಿಗಳಾಗಿ ಕೆಲಸ ಮಾಡಿದ್ದಕ್ಕೆ ಸಾರ್ಥಕವಾಗುವಂತೆ ಇದೊಂದು ಪದವಿ ಸಿಕ್ಕಿದಹಾಗಾಯಿತು. ಅವರು ಕಳೆದ 5 ವರ್ಷಗಳಿಂದ ಹಾಗೂಹೀಗೂ ಕಾಲ ಕಳೆದುಕೊಂಡು ದೇಶದಲ್ಲಿದ್ದಾರೆ. ಆದ್ದರಿಂದ ಅವರಿಗೆ ಬಹಳವಾಗಿ ವಂದನೆಯನ್ನು ಸಲ್ಲಿಸುತ್ತೇನೆ. ಅವರು ಮಂತ್ರಿಗಳಾಗಿದ್ದ ನಾಲ್ಕೂವರೆ ವರ್ಷಗಳ ಅವಧಿಯಲ್ಲಿ ನಾನು ಖಂಡಿತವಾಗಿ ಅವರ ರೂಮಿಗೇ ಹೋಗಿರಲಿಲ್ಲ. ಅವರು 72 ಓಟುಗಳನ್ನು ಹೊಂದಿದರೆಂದು ಸಂತೋಷದಿಂದ ಅಭಿನಂದಿಸುತ್ತಿಲ್ಲ. ಅವರ ಅವಧಿ ಮುಗಿದು ಯಾವಾಗಲೋ ಮನೆಗೆ ಹೋಗಬಹುದು. ಆದರೂ ಬಹಳ ವಂದನೆಯನ್ನು ಸಲ್ಲಿಸುತ್ತೇನೆ.

*ಶ್ರೀ ಟಿ. ಮರಿಯಪ್ಪನವರು (ಮೈಸೂರು ಸಿಟಿ ಉತ್ತರ).—ಅಧ್ಯಕ್ಷರೇ, ಶ್ರೀ ಚೆನ್ನಿಗರಾಮಯ್ಯನವರನ್ನು ಅಭಿನಂದಿಸುತ್ತಾ ಎರಡು ಮೂರು ಮಾತುಗಳನ್ನು ಮಾತ್ರ ಹೇಳುತ್ತೇನೆ. ಆಗಲೇ ಶ್ರೀ ಸಿದ್ದಲಿಂಗಯ್ಯನವರು ಅವರ ವಿಷಯದಲ್ಲಿ ನಿಜಾಂಶವನ್ನು ನುಡಿದಿದ್ದಾರೆ. ಚೆನ್ನಿಗರಾಮಯ್ಯನವರು ಅವರ ಹೆಸರಿಗೆ ತಕ್ಕಂತೆ ನಡೆ, ನುಡಿ, ಮಾತಿನಲ್ಲಿ ಕೂಡ ಬಹಳ ಹೆಸರು ಗಳಿಸಿರುವವರೇ ಆಗಿದ್ದಾರೆ. ಒಳ್ಳೆಯ ನಡತೆಯಿರುವ ಮತ್ತು ವಿಶೇಷ ಬುದ್ಧಿಶಾಲಿಗಳಾದ ವ್ಯಕ್ತಿಗಳು. ಕಳೆದ 4½ ವರ್ಷಗಳಲ್ಲಿ ಮೈಸೂರು ದೇಶದ ಪ್ರಜೆಗಳ ಹೃದಯದಲ್ಲೇ ಒಂದು ಸ್ಥಾನ ಗಳಿಸಿದ್ದಾರೆ, ನಿಷ್ಪಕ್ಷಪಾತವಾಗಿ ದಕ್ಷತೆಯಿಂದ ದುಡಿದಿದ್ದಾರೆ ಎಂದು ಎಲ್ಲಾ ಜನರೂ ಕೂಡ ಹೇಳುತ್ತಾರೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಈ ದಿವಸ ಮಾನ್ಯ ಜನಾಬ್ ಇಮಾಂರವರು ಈ ಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ವಿಚಾರದಲ್ಲಿ ಒಂದು ನತ್ಸಂಪ್ರದಾಯವನ್ನು ಸ್ಥಾಪಿಸಬೇಕೆಂದು ಹೇಳಿದರು. ಮೈಸೂರು ದೇಶದ ಶಾಸನಸಭೆಯ ಚರಿತ್ರೆಯಲ್ಲಿ ಮಂತ್ರಿಗಳಾಗಿದ್ದವರು ಅಧ್ಯಕ್ಷರಾಗಿ ಬರಕೂಡದೆಂದು ಹೇಳುವಹಾಗಿಲ್ಲ. ದೇಶದಲ್ಲಿ ಆ ರೀತಿ ಹಿಂದೆ ಬಂದಿರುವುದಕ್ಕೆ ನಿದರ್ಶನವಿದೆ. ಈ ವಿಚಾರದಲ್ಲಿ ಎರಡು ನಿದರ್ಶನಗಳಿವೆ. ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಮತ್ತು ಶ್ರೀ ಎಚ್. ಬಿ. ಗುಂಡಪ್ಪಗೌಡರು ಆ ರೀತಿಯಾಗಿ ಅಧ್ಯಕ್ಷರಾಗಿದ್ದರು. ಇನ್ನು ಆ ವಿಚಾರಕ್ಕೆ ಹೋಗಬೇಕಾಗಿಲ್ಲ. ಪ್ರಜೆಗಳಿಗೆ ವಿಶ್ವಾಸವಿದೆ. ಪ್ರಜೆಗಳ ಪ್ರತಿನಿಧಿಗಳು ಯಾರಾದರೂ ಅಧ್ಯಕ್ಷಸ್ಥಾನಕ್ಕೆ ನಿಂತು ಬಂದರೆ ಯಾವ ವಿಧದಲ್ಲೂ ಯಾರೂ ಅನುಮಾನ ಅಥವಾ ಶಂಕೆಪಡಬೇಕಾಗಿಲ್ಲ ಎಂಬುದು ಸಂಪೂರ್ಣವಾಗಿ ವ್ಯಕ್ತವಾಗಿದೆ.

ಇನ್ನೊಂದು ಅಂಶವನ್ನು ಕೆಲವರು ಹೇಳುತ್ತಾರೆ. ಮಂತ್ರಿಗಳಾಗಿದ್ದವರು ಇಲ್ಲಿ ಉಪಾಧ್ಯಕ್ಷರಾಗಿದ್ದಾರೆಂಬ ವಿಚಾರ ಪ್ರಸ್ತಾಪಮಾಡಿದ್ದಾರೆ. ಅವರಿಗೆ ಹೇಳುವುದು ಈ ಉಪಾಧ್ಯಕ್ಷಸ್ಥಾನ ಬಹಳ ಗೌರವಯುತವಾದುದ್. ಅದೂ ಈ ಶಾಸನಸಭೆ ಸದಸ್ಯರು ಚುನಾವಣೆ ಮಾಡಿರುವಾಗ ಇದರಲ್ಲಿ ಅಂತಸ್ತು ಅಥವಾ ಗೌರವ ಹೆಚ್ಚು ಕಡಮೆ ಎಂಬ ಭಾವನೆ ಯಾರಿಗೂ ಇರಬಾರದು.

ಮದರಾಸು ಪ್ರಾಂತ್ಯದ ಮುಖ್ಯಮಂತ್ರಿಗಳ ಚರಿತ್ರೆ ನೋಡಿದರೆ ಅವರು ಪಶ್ಚಿಮ ಬಂಗಾಳದ ಗವರ್ನರ್ ಆಗಿದ್ದರು; ಇಂಡಿಯಾದೇಶದ ಪ್ರಥಮ ಗವರ್ನರ್ ಜನರಲ್ ಆಗಿದ್ದರು; ಇಂಡಿಯಾ ಸರ್ಕಾರದ ಹೋಂ ಮಿನಿಸ್ಟರು ಮತ್ತು ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಮಿನಿಸ್ಟರು ಆಗಿದ್ದರು; ಈಗ ಮದರಾಸಿನ ಮುಖ್ಯಮಂತ್ರಿಗಳಾಗಿದ್ದಾರೆ. ಹೀಗೆ ದೇಶದ ಕರೆ ಎಂದು ತಿಳಿದುಕೊಂಡು ಶ್ರೀಮಾನ್ ಚೆನ್ನಿಗರಾಮಯ್ಯನವರು ಉಪಾಧ್ಯಕ್ಷ ಪದವಿಯನ್ನು ಅಲಂಕರಿಸುತ್ತಾರೆ. ಅವರು ನಿಷ್ಪಕ್ಷಪಾತ ದೃಷ್ಟಿಯನ್ನುಳ್ಳವರಾಗಿದ್ದಾರೆ ಆ ವಿಷಯದಲ್ಲಿ ಎದುರು ಪಕ್ಷದವರಾರೂ ಅನುಮಾನಪಡಬೇಕಾಗಿಲ್ಲ. ಅವರು ಯಾವ ದಿವಸ ಅಧ್ಯಕ್ಷತೆಯನ್ನು ವಹಿಸುತ್ತಾರೋ ಅವೊತ್ತು ನಿರ್ವಂಚನೆಯಿಂದ ಕೆಲಸಮಾಡುತ್ತಾರೆ, ನಿರ್ದಾಕ್ಷಿಣ್ಯವಾಗಿ ಕೆಲಸಮಾಡುತ್ತಾರೆ, ನಿಷ್ಪಕ್ಷಪಾತವಾಗಿ ಕೆಲಸಮಾಡುತ್ತಾರೆ ಎಂಬ ಭರವಸೆಯಿದೆ. ಅನೇಕ ಸಂದರ್ಭಗಳಲ್ಲಿ ನ್ಯಾಯವನ್ನು ಎತ್ತಿಹಿಡಿದು ಒಂದೊಂದು ಸಾರಿ ಸ್ನೇಹಿತರ ನಿಷ್ಠೂರವನ್ನೂ ಸಹ ಕಟ್ಟಿಕೊಂಡಿದ್ದಾರೆ. ಆದ್ದರಿಂದ ನಾನು ಯಾವ ಶಂಕೆಯನ್ನೂ ಇಟ್ಟುಕೊಳ್ಳದೆ ನಿರ್ವಂಚನೆಯಿಂದ ಸಂಪೂರ್ಣವಾಗಿ ಅವರನ್ನು ಸ್ವಾಗತಿಸಿ ಮತ್ತೊಮ್ಮೆ ಹೃತ್ಪೂರ್ವಕವಾಗಿ ಅವರಿಗೆ ವಂದನೆಗಳನ್ನು ಅರ್ಪಿಸುತ್ತೇನೆ ಮತ್ತು ದೇವರು ಅವರಿಗೆ ಶಕ್ತಿ, ಸಾಮರ್ಥ್ಯಗಳನ್ನು ಕೊಡಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುರುವೇಕೆರೆ).—ಸ್ವಾಮಿ, ಈಗ ಈ ಮಾನ್ಯ ಸಭೆಯ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟ ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸ್ವಾಮಿ, ಶ್ರೀಮಾನ್ ಚೆನ್ನಿಗರಾಮಯ್ಯನವರು ನನಗೆ ಅನೇಕ ವರ್ಷಗಳಿಂದ ಪರಿಚಿತರಾಗಿದ್ದಾರೆ. ಅವರು ನಮ್ಮ ಡಿಸ್ಟ್ರಿಕ್ಟ್‌ನವರು; ಅದೂ ಒಂದು ಅಭಿಮಾನ. ಅಲ್ಲದೆ ಅವರ ವಿಚಾರದಲ್ಲಿ ಈಗತಾನೆ ನನ್ನ ಸ್ನೇಹಿತರು ಹೇಳಿದ ಪ್ರತಿ

(ಶ್ರೀ ಬಿ. ಹುಚ್ಚೇಗೌಡರು.)

ಯೊಂದು ಅಂಶವನ್ನೂ ಕೂಡ ಅನುಮೋದಿಸಿ ನಾನು ಒಂದೆರಡು ವಿಚಾರ ಹೇಳುತ್ತೇನೆ. ಒಂದು ವಿಚಾರ ಏನೆಂದರೆ ಹಿಂದೆ ಅವರು ಮಂತ್ರಿಗಳಾಗಿದ್ದಾಗ ನಾನು ಅವರ ಕೆಲಸಕಾರ್ಯಗಳನ್ನು ಟೀಕಿಸಿದ್ದು ಉಂಟು. ಹಿಂದಿನ ಮಂತ್ರಿಗಳು ಅನೇಕ ವೇಳೆ ತಪ್ಪುದಾರಿ ಹಿಡಿದಿದ್ದರೂ—ಅದು ನನ್ನ ಅಭಿಪ್ರಾಯ:—ಅಂಥಾ ಸಂದರ್ಭಗಳಲ್ಲಿ ಶ್ರೀಮಾನ್ ಚೆನ್ನಿಗರಾಮಯ್ಯನವರು—ಇದನ್ನು ನಾನು 4½ ವರ್ಷದಿಂದ ಎದುರು ಪಕ್ಷದಲ್ಲಿದ್ದು ನೋಡಿದ್ದೇನೆ—ಎಲ್ಲರಿಗಿಂತಲೂ ಕೂಡ ಅವರು ಹೆಚ್ಚು ಜಾಗರೂಕತೆಯಿಂದ ಸ್ವಲ್ಪಮಟ್ಟಿಗೆ ನ್ಯಾಯದೃಷ್ಟಿಯಿಂದ ನಡೆದಿದ್ದಾರೆ ಎಂದು ಹೇಳುತ್ತೇನೆ. ಇದು ಕೇವಲ ನಮ್ಮ ಡಿಸ್ಕ್ರಿಕ್ಷನವರು ಎಂದು ಹೇಳುವುದಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಅವರು ಅಧಿಕಾರದಲ್ಲಿದ್ದಾಗ ಬಹಳ ಉತ್ತಮವಾಗಿ ಕೆಲಸ ನಡೆಸಿದರು ಎಂದು ನನ್ನ ಅಭಿಪ್ರಾಯ. ಈಗ ಹಿಂದೆ ಮಂತ್ರಿಗಳಾಗಿದ್ದರು ಎಂಬ ಮಾತಲ್ಲ. ಅವರು ಈಗ ಉಪಾಧ್ಯಕ್ಷರಾಗಿ ಜುನಾಯಿಸಲ್ಪಟ್ಟು, ತಮ್ಮ ಕರ್ತವ್ಯವನ್ನು ನಿಷ್ಠೆಯಿಂದಲೂ, ತ್ಯಾಗದಿಂದಲೂ ಮತ್ತು ನ್ಯಾಯಮಾರ್ಗದಿಂದಲೂ ನಡೆಸುತ್ತಾರೆ ಎಂಬುದರಲ್ಲಿ ನಮಗೆ ಭರವಸೆ ಇದೆ. ಅನುಮಾನಪಡಬೇಕಾಗಿಲ್ಲ, ಅನುಮಾನಪಡುತ್ತಾ ಇಲ್ಲ, ಅದನ್ನು ಶ್ರೀಮಾನ್ ಮರಿಯಪ್ಪನವರು ತಿಳಿದುಕೊಳ್ಳಲಿ ಎಂದು ಹೇಳುತ್ತಾ ಇದ್ದೇನೆ. ಆ ತರಹ ಅನುಮಾನ ಇಟ್ಟುಕೊಳ್ಳುವುದು ಬೇಡ. ಅವರು ಈ ಪಕ್ಷದವರ ವಿಚಾರದಲ್ಲಿ ನ್ಯಾಯದೃಷ್ಟಿಯಿಂದ ಕರ್ತವ್ಯ ನಿರ್ವಹಣೆಮಾಡುವ ವಿಷಯದಲ್ಲಿ ಸಂಶಯವಿಲ್ಲ. ಹಾಗೆಯೇ ಈ ಕಾರ್ಯವನ್ನು ಅವರು ನಿರ್ದಾಕ್ಷಿಣ್ಯವಾಗಿ ಮತ್ತು ಯಾವ ಒಂದು ಅಭಿಮಾನ ಇಲ್ಲದೆ, ಯಾವ ಪಾರ್ಟಿ ಪಂಗಡಗಳ ಪ್ರಭಾವಕ್ಕೂ ಒಳಗಾಗದೆ ನಡೆಸುತ್ತಾರೆ ಎಂಬ ದೃಢ ನಂಬಿಕೆ ನಮಗೆ ಇದೆ. ಅಪನಂಬಿಕೆ ಇದ್ದರೆ ಅವರ ಮರಲ್ಲೇ ಇರಬೇಕೇ ಹೊರತು ನಮ್ಮ ಕಡೆ ಯಾರೇ ಆದರೂ ಒಂದೇ. ನಮ್ಮಲ್ಲಿ ಆ ರೀತಿ ಭಿನ್ನಾಭಿಪ್ರಾಯ ಬರುವುದಕ್ಕೆ ಕಾರಣವಿಲ್ಲ. ಅವರು ಈ ಕೆಲಸವನ್ನು ಒಪ್ಪಿಕೊಂಡದ್ದಕ್ಕಾಗಿ ಅವರನ್ನು ವಂದಿಸಿ ಸಂಪೂರ್ಣವಾಗಿ ಅಭಿನಂದಿಸುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡರು (ಕುಣಿಗಲ್).—ಶ್ರೀಮಾನ್ ಚೆನ್ನಿಗರಾಮಯ್ಯನವರು ಉಪಾಧ್ಯಕ್ಷಸ್ಥಾನಕ್ಕೆ ಜುನಾಯಿಸಲ್ಪಟ್ಟಿರುವುದಕ್ಕಾಗಿ ಅವರನ್ನು ಅಭಿವಂದಿಸಬೇಕಾದದ್ದು ಆದ್ಯ ಕರ್ತವ್ಯ ಎಂಬ ದೃಷ್ಟಿಯಿಂದ ಎದ್ದು ನಿಂತಿದ್ದೇನೆ. ಶ್ರೀಮಾನ್ ಚೆನ್ನಿಗರಾಮಯ್ಯನವರು ನಮ್ಮ ಜಿಲ್ಲೆಯವರಾಗಿದ್ದು, ಬಹಳ ವರ್ಷಗಳಿಂದ ನನ್ನ ಸ್ನೇಹಿತರಾಗಿದ್ದಾರೆ. ರಾಜಕೀಯಕ್ಕೆ ಕಾಲಿಟ್ಟರಾಗಾಯ್ತು, ಅವರು ನನ್ನ ಸ್ನೇಹಿತರಾಗಿದ್ದಾರೆ. ಅವರು ಬೇರೆ ವಿಧದಲ್ಲಿ—ಬೇರೆ ಒಂದು ರೂಪದಲ್ಲಿ ಸೇವೆಯನ್ನು ನಲ್ಲಿಸುತ್ತಾ ಬರುತ್ತಿದ್ದರೂ ಹರಿಜನೋದ್ಧಾರ ಕಾರ್ಯಕ್ಕೆ ರಾಜಕೀಯಕ್ಕೆ ಕಾಲಿಟ್ಟರಾಗಾಯ್ತು ಎಷ್ಟುಮಟ್ಟಿಗೆ ನಿರ್ವಂಚನೆಯಿಂದ ಸೇವೆ ಸಲ್ಲಿಸಿದ್ದಾರೆ ಎಂಬುದನ್ನು ನಾನು ಚೆನ್ನಾಗಿ ಅರಿತವನಾಗಿದ್ದೇನೆ. ಹೀಗೆಯೇ ಅವರು ಮಂತ್ರಿಮಂಡಲದಲ್ಲಿ ಯಾವ ರೀತಿ, ಎಷ್ಟುಮಟ್ಟಿಗೆ ನಿಷ್ಪಕ್ಷಪಾತವಾಗಿ, ಧೈರ್ಯದಿಂದ, ನಿರ್ವಂಚನೆಯಿಂದ ಕೆಲಸಮಾಡಿದ್ದಾರೆ ಎಂಬುದನ್ನು ವಿವರಿಸಿ ಅವರ ಸಹೋದ್ಯೋಗಿಗಳಾದ ಶ್ರೀಮಾನ್ ಮರಿಯಪ್ಪನವರು ಅವರನ್ನು ಅಭಿನಂದಿಸಿರುತ್ತಾರೆ; ಎದುರುಪಕ್ಷದ ಶ್ರೀಮಾನ್ ಹುಚ್ಚೇಗೌಡರೂ ಸಹ ಮುಕ್ತಕಂಠದಿಂದ ಹೊಗಳಿದ್ದಾರೆ. ಇದು ಹೆಮ್ಮೆಯ ವಿಷಯ. ಅವರು ಎಷ್ಟುಮಟ್ಟಿಗೆ ದಕ್ಷತೆಯಿಂದ, ನಿರ್ವಂಚನೆಯಿಂದ, ನಿಷ್ಪಕ್ಷಪಾತವಾಗಿ ಕೆಲಸಮಾಡಿದ್ದಾರೆ ಎಂಬುದನ್ನು ಹೇಳುವುದಕ್ಕೆ ಶ್ರೀಮಾನ್ ಹುಚ್ಚೇಗೌಡರೇ ಸಾಕ್ಷಿಯಾಗಿದ್ದಾರೆ. ಅದಕ್ಕಾಗಿ ಹುಚ್ಚೇಗೌಡರಿಗೆ ಕೃತಜ್ಞನಾಗಿದ್ದೇನೆ. ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ಉಪಾಧ್ಯಕ್ಷಸ್ಥಾನಕ್ಕೆ ಆರಿಸಿರುವುದು ಬರೀ ಯಾವುದೋ ಒಂದು ದೃಷ್ಟಿಯಿಂದ ಅಲ್ಲ. ಹಿಂದಿನ ಮಂತ್ರಿಗಳಾಗಿದ್ದರು ಅಥವಾ ಇನ್ನಾವುದೋ ಒಂದು ಪಂಗಡಕ್ಕೆ ಸೇರಿದವರು ಎಂಬ ದೃಷ್ಟಿಯಿಂದ ಆರಿಸಿಲ್ಲ. ಉಪಾಧ್ಯಕ್ಷಸ್ಥಾನಕ್ಕೆ ಎಂತಹವರನ್ನು ಆರಿಸಬೇಕು, ಯಾವ ಪಟ್ಟದವರನ್ನು ಆರಿಸಬೇಕು ಎಂಬ ಎಲ್ಲಾ ದೃಷ್ಟಿಯನ್ನೂ ಇಟ್ಟುಕೊಂಡು ಆ ಸ್ಥಾನಕ್ಕೆ ಶ್ರೀಮಾನ್ ಚೆನ್ನಿಗರಾಮಯ್ಯನವರು ಯೋಗ್ಯರಾದವರು ಅದ್ದರಿಂದ ಆರಿಸಬೇಕು ಎಂಬ ದೃಷ್ಟಿಯಿಂದ ಆರಿಸಿದ್ದೇವೆ. ಆ ವಿಷಯವನ್ನು ಎದುರುಪಕ್ಷದವರೂ ಕೊಂಡಾಡಿದ್ದಾರೆ. ಆದ್ದರಿಂದ ನಾನು ಹೆಚ್ಚು ಮಾತನಾಡಬೇಕಾದ ಪ್ರಮೇಯ ಇಲ್ಲ. ಈಗಾಗಲೇ ವೇಳೆಯಾಗಿದೆ. ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ಅಭಿನಂದಿಸುವುದು ಈ ದಿವಸ ನನಗೆ ಒಂದು ಸಂತೋಷದ ವಿಷಯ ಎಂದು ಇಷ್ಟುಮಾತ್ರ ಹೇಳಿ, ಈ ಉಪಾಧ್ಯಕ್ಷ ಸ್ಥಾನಕ್ಕೆ ಅವರು ಆರಿಸಿ ಬಂದಿರುವುದಕ್ಕಾಗಿ ಅವರನ್ನು ಮುಕ್ತಕಂಠದಿಂದ ಅಭಿನಂದಿಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು (ದಾವಣಗೆರೆ).—ಸಭಾಧ್ಯಕ್ಷರೇ, ಈ ದಿವಸ ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ನಮ್ಮ ಉಪಸಭಾಧ್ಯಕ್ಷಸ್ಥಾನಕ್ಕೆ ಆರಿಸಿದ್ದು ನಮಗೆಲ್ಲರಿಗೂ ಬಹಳ ಸಂತೋಷ ಎಂಬುದನ್ನು ವ್ಯಕ್ತಪಡಿಸುತ್ತೇನೆ. ಅವರು ಆರಿಸಿ ಬಂದದ್ದು ನಮ್ಮ ಈ ಸಭೆಗೂ ಕೂಡ ಒಂದು ಭೂಷಣ. ಏಕೆಂದರೆ ಹಿಂದೆ ಮಾಜಿ ಮಂತ್ರಿಗಳಾಗಿದ್ದರು ಎಂದು ಹೇಳುವುದು ನಿಜ. ಆದರೆ ಮಂತ್ರಿಗಳು ಜುನಾವಣೆ ಆಗಬೇಕಾದರೆ ಪರಿಸ್ಥಿತಿ ಹೇಗೆ ಇರುತ್ತದೆ ಎಂದರೆ ಒಬ್ಬ ನಾಯಕರು ಅವರನ್ನು ಆರಿಸಿಕೊಂಡಿರುತ್ತಾರೆ. ಆದ್ದರಿಂದ ಅದಕ್ಕೆ ಹೆಚ್ಚಿನ ಮಹತ್ವ ಇರುವುದಿಲ್ಲ. ಈ ದಿವಸ ಈ ಸ್ಥಾನಕ್ಕೆ ಜುನಾವಣೆ ಆಗಿ ಬರಬೇಕಾದರೆ ಎದುರು ಪಕ್ಷದ ಎಲ್ಲಾ ಜನರೂ ಸೇರಿ—ಎಲ್ಲರ ಪ್ರೀತಿ ಸಂಪಾದಿಸಿಕೊಂಡು ಆರಿಸಿ ಬರಬೇಕಾಗಿದೆ. ಆದ್ದರಿಂದ ಇವರು ಪರವಾಗಿಲ್ಲ, ನರಿಯಾಗಿ ತೂಕಮಾಡುವಂಥಾ ಶಕ್ತ, ನ್ಯಾಯಮಾಡುವಂಥಾ ಶಕ್ತ ಇವರ ಕೈಯಲ್ಲಿದೆ ಎಂದು ತಿಳಿದು ಇವರನ್ನು ಆರಿಸಿಕೊಂಡಿದ್ದೇವೆ. ಈ ದಿವಸ ಅವರು ನಮ್ಮ ಸಭೆಯ ಉಪಸಭಾಧ್ಯಕ್ಷಸ್ಥಾನಕ್ಕೆ ಬಂದಿದ್ದಾರೆ. ಈಗ ತಾನೆ ಒಂದು ಮಾತು ನನ್ನ ಕಿವಿಗೆ ಬಿತ್ತು. ಎಷ್ಟೋ ಜನರು ಈಗಾಗಲೇ ಮಾತನಾಡಿದ್ದಾರೆ, ಸಾಕು ಬಿಡಿ, ಹೆಂಗಸರು ಹೇಳುವುದೇನಿದೆ ವೇಳೆ ಆಯಿತು ಎಂದು ಕೆಲವರು ಹೇಳುತ್ತಾ ಇದ್ದಾರೆ. ಖಂಡಿತ ಬಿಡುವುದಕ್ಕೆ ಸಾಧ್ಯವಿಲ್ಲ. ನಮ್ಮ ಹೆಂಗಸರ ಸಂಖ್ಯೆ ದೇಶದಲ್ಲಿ 45 ಲಕ್ಷ ಜನ ಸಂಖ್ಯೆ ಇದೆ. 45 ಲಕ್ಷ ಜನಸಂಖ್ಯೆ ಇದ್ದರೂ ಅಭಿನಂದನೆ ಮಾಡುವುದಕ್ಕೆ, ವಂದಿಸುವುದಕ್ಕೆ ಕಾರಾವಕಾಶವಿಲ್ಲವೆಂದು ಅವಕಾಶ ಕೊಡದಿದ್ದರೆ ನಾವು ಇಲ್ಲಿ ಹೇಗೆ ಇರಬೇಕು! ಈ ಸಭೆಗೆ ಜುನಾಯಿತರಾಗಿ ಬಂದಿರುವವರು 3 ಜನ ಬಂದಿದ್ದೇವೆ. ಇಷ್ಟು ಸಂಖ್ಯೆ ಇದ್ದರೂ ಕೂಡ ಅಭಿನಂದನೆಯನ್ನು ಅರ್ಪಿಸುವುದು ನಮ್ಮ ಕರ್ತವ್ಯ ಎಂದು ತಿಳಿದುಕೊಂಡು ಅವರೆಲ್ಲರ ಪರವಾಗಿ ನಾನು ಶ್ರೀಮಾನ್ ಚೆನ್ನಿಗರಾಮಯ್ಯನವರಿಗೆ ಅಭಿನಂದನೆಯನ್ನು ಅರ್ಪಿಸುತ್ತೇನೆ.

5-30 P. M.

ಅವರು ಈ ದಿವಸ ಸಭಾಸ್ಥಾನಕ್ಕೆ ಬಹಳ ಯೋಗ್ಯರಾದವರು; ಹಿಂದೆಯೂ ಬಹಳ ನ್ಯಾಯವಾದ ರೀತಿಯಲ್ಲಿಯೂ ದಕ್ಷತೆಯಿಂದಲೂ ನಡೆಸಿಕೊಂಡು ಬಂದಿದ್ದಾರೆ. ಹಾಗೆಯೇ ಈ ಸ್ಥಾನವನ್ನಲಂಕರಿಸಿ ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಅಂಥ ಗುಣಗಳು ಅವರಲ್ಲಿಲ್ಲದಿದ್ದರೆ ಅವರು ದೇಶದ ನಾಯಕರಾಗುತ್ತಾರೆಯೇ! ದೇವರು ಅವರಿಗೆ ಆಯುರಾರೋಗ್ಯಭಾಗ್ಯಗಳನ್ನು ಕೊಡಲಿ, ದಿವಸ ದಿವಸಕ್ಕೂ ಹೆಚ್ಚಿನ ಸ್ಥಾನಪಡೆಯಲೆಂದು ಹಾರೈಸುತ್ತಾ ಅವರಿಗೆ ನನ್ನ ಅಭಿನಂದನೆಗಳನ್ನು ಸಂತೋಷದಿಂದ ಅರ್ಪಿಸುತ್ತೇನೆ.

*ಶ್ರೀ ಎ. ಭೀಮಪ್ಪನಾಯಕರು (ಮೊಳಕಾಲ್ಮೂರು). —ಅಧ್ಯಕ್ಷರೇ, ಇಂದು ಶ್ರೀಮಾನ್ ಚೆನ್ನಿಗರಾಮಯ್ಯನವರು ಈ ಸಭೆಯ ಉಪಾಧ್ಯಕ್ಷಸ್ಥಾನಕ್ಕೆ ಚುನಾಯಿತರಾಗಿದ್ದಕ್ಕಾಗಿ ನಾನು ಅವರಿಗೆ ಅಭಿನಂದನೆಗಳನ್ನು ಅರ್ಪಿಸುವ ಸಂದರ್ಭದಲ್ಲಿ, ಈ ಸ್ಥಾನವು ಅವರು ಹಿಂದೆ ಅಲಂಕರಿಸಿದ್ದ ಮಂತ್ರಿಸ್ಥಾನಕ್ಕಿಂತಲೂ ಅತ್ಯುನ್ನತ ಸ್ಥಾನವೆಂದು ನನ್ನ ಭಾವನೆ ಎಂದು ಹೇಳಬಯಸುತ್ತೇನೆ. ಸ್ಪೀಕರ್ ಪದವಿ ಉನ್ನತವಾದದ್ದು, ಡೆಪ್ಯುಟಿ ಸ್ಪೀಕರ್ ಪದವಿ ಅಷ್ಟು ಉನ್ನತವಾದದ್ದಲ್ಲವೆಂದು ಭಾವಿಸುವವನು ನಾನಲ್ಲ. ಈ ಸಂದರ್ಭದಲ್ಲಿ ನನ್ನ ಮಿತ್ರರು ಕೆಲವರು ಅವರಿಗೆ ಕೊಡತಕ್ಕ ದುಡ್ಡು ಸಂಬಳ, ಸ್ಥಾನ ಮುಂತಾದುವುಗಳನ್ನು ಕುರಿತು ಮಾತನಾಡುವುದಕ್ಕೆ ಎದ್ದರೇ ಹೊರತು ಅವರು ಅವರಿಗೆ ಹಾರ್ದಿಕವಾಗಿ ಅಭಿನಂದನೆಗಳನ್ನರ್ಪಿಸುವುದಕ್ಕೆ ಎದ್ದ ಹಾಗೆ ಕಾಣಲಿಲ್ಲ. ಶ್ರೀ ಚೆನ್ನಿಗರಾಮಯ್ಯನವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಮರಿಯಪ್ಪನವರೂ ಒಂದು ಸ್ಥಾನಹೊಂದುವುದಕ್ಕೆ ಪ್ರಯತ್ನಪಡುತ್ತಿದ್ದಾರೆಂದು ಹೇಳುವುದಕ್ಕೆ ಹೊರಟರು. ಏನೇ ಆಗಲಿ ಅಭಿನಂದನೆಗಳನ್ನು ಮಾಡುವ ಕಾಲದಲ್ಲಿ ಹೇಳತಕ್ಕ ಮಾತುಗಳಲ್ಲ ಇವು. ಬಹುಶಃ ಅವರು ಅಭಿನಂದನೆಗಳನ್ನು ಕೊಡಲು ಏಳಲಿಲ್ಲ; ಇನ್ನೊಬ್ಬರನ್ನು ಅಣಕಿಸುವುದಕ್ಕೆ ಎದ್ದಂತೆ ತೋರಿತು. ಮಂತ್ರಿಮಂಡಳಸ್ಥಾನ ಹೆಚ್ಚಿನದು, ಈ ಸಭೆಯಲ್ಲ, ಎಂಬ ಉದ್ದೇಶವಿದ್ದರೆ, ರಾಜಾಜಿಯಂಥವರು ಮಂತ್ರಿಮಂಡಳಸ್ಥಾನದಿಂದ ಇಳಿದು, ಇಂದು ಲೋಕದ ಕರೆ ಬಂತು ಎಂದು ಮತ್ತೆ ಆಡಳಿತಕ್ಕೆ ಬರಲು ಸಾಧ್ಯವಾಗುತ್ತಿತ್ತೇ? ಸೇವೆಮಾಡುವುದಕ್ಕೆ ಯಾವ ಕ್ಷೇತ್ರವಾದರೂ ಸರಿಯೇ ಸೇವೆಯು ನಮ್ಮ ಶ್ರೇಯಸ್ಸಿಗೆ ಎಂದು ಮರಿಯಪ್ಪನವರೂ ತಿಳಿದಿದ್ದಾರೆ. ಮಂತ್ರಿಮಂಡಳವಲ್ಲದಿದ್ದರೆ ಈ ಸಭೆಯಲ್ಲೇ ತಮ್ಮ ಸೇವೆ ಸಲ್ಲಿಸುವುದಕ್ಕೆ ಅವರು ಸಿದ್ಧವಾಗಿದ್ದಾರೆ.

ಶ್ರೀ ಬಿ. ಹುಚ್ಚೇಗೌಡರು.—ನಾನೇನೂ ಅಣಕಿಸುವುದಕ್ಕಾಗಿ ಏನನ್ನೂ ಹೇಳಲಿಲ್ಲ. ಅವರು ಅಣಕಮಾಡಿದ್ದಕ್ಕೆ ಉತ್ತರ ರೂಪವಾಗಿ ಅಣಕವಾಗಿ ನಾನು ಮಾತನಾಡಿದೆನೇ ಹೊರತು ಚೆನ್ನಿಗರಾಮಯ್ಯನವರ ಮೇಲೆ ನಾನೇನು ಹೇಳಲಿಲ್ಲ.

ಶ್ರೀ ಎ. ಭೀಮಪ್ಪನಾಯಕರು.—ಇನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರ ದಕ್ಷತೆಯ, ನ್ಯಾಯಪರತೆಯ ವಿಚಾರದಲ್ಲಿ ಎದುರುಪಕ್ಷದವರು ಸಾಮಾನ್ಯವಾಗಿ ಅವರನ್ನು ಅಭಿನಂದಿಸಿ ನ್ಯಾಯಪರರಾಗಿರಬೇಕೆಂದು ಹೇಳಬೇಕಾದದ್ದೂ ಪದ್ಧತಿ. ತಾವು ಆ ರೀತಿ ಹೇಳಲಿಲ್ಲ!

ಎರಡನೆಯದಾಗಿ ಎದುರು ಪಕ್ಷದವರಿಗೂ ಒಂದು ಸ್ಥಾನ ಕೊಡುತ್ತಾರೆ ಎಂದು ಹೇಳಿದರು. ಅವರೆಲ್ಲರನ್ನೂ ಸೇರಿಸಿ ಅವರನ್ನು ಒಂದು ಪಕ್ಷದವರು ಎಂದು ಪರಿಗಣನೆ ಮಾಡಿದ ಮೇಲೆ ನೋಡೋಣ. ಇಂಗ್ಲೆಂಡಿನಲ್ಲಿರುವ ಹಾಗೆ 300 ಜನ ಸದಸ್ಯರು ಒಂದು ಪಕ್ಷದಲ್ಲಿದ್ದು, ಇನ್ನೊಂದು ಕಡೆ 255 ಜನ ಇದ್ದಾಗ ಹಾಗೆ ಸ್ಥಾನವನ್ನು ಕೊಡೋಣ. ಈಗ 75 ಜನ ಒಂದು ಕಡೆ, 18 ಜನ ಒಂದು ಕಡೆ ಇರುವಾಗ ಸ್ವಲ್ಪ ಯೋಚನೆ ಮಾಡಲೇಬೇಕು. ಅಲ್ಲದೆ, ಅಧ್ಯಕ್ಷಸ್ಥಾನಕ್ಕೆ ಯಾವ ಪಕ್ಷದವರಾದರೂ ಸರಿ, ಆ ಸ್ಥಾನಕ್ಕೆ ಬಂದ ಮೇಲೆ ಅವರು ಪಕ್ಷಾತೀತರು. ಶ್ರೀಮಾನ್ ಚೆನ್ನಿಗರಾಮಯ್ಯನವರು ಯಾವ ಸ್ಥಾನದಲ್ಲಿದ್ದರೂ ದಕ್ಷತೆಯಿಂದ ಕೆಲಸಮಾಡುತ್ತಾರೆಂಬುದರಲ್ಲಿ ಅನುಮಾನವಿಲ್ಲ. ಇಂಥ ಸಂದರ್ಭದಲ್ಲಿ ಶ್ರೀಮಾನ್ ಚಿಕ್ಕಲಿಂಗಯ್ಯನವರು ತಾವು ಅವರಿಗೆ ಓಟು ಕೊಡಲಿಲ್ಲ ಎಂದು ಹೇಳಿದರು. ಅದನ್ನವರು ಹೇಳಬಾರದಾಗಿತ್ತು. ಅಭಿನಂದನೆಯಲ್ಲಿ ಕೊಟ್ಟ ಬೆರೆಯೆಲ್ಲಾ ಅಲ್ಲಿಗೆ ಹೋದಂತಾಯಿತು!

ಅದೇನೇ ಇರಲಿ, ಶ್ರೀಮಾನ್ ಚೆನ್ನಿಗರಾಮಯ್ಯನವರು ಈ ಸ್ಥಾನಕ್ಕೆ ಎಲ್ಲ ವಿಧದಲ್ಲೂ ಅರ್ಹರು. ಶ್ರೀಮಾನ್ ಮರಿಯಪ್ಪನವರು, ಸಿದ್ದಪ್ಪನವರು, ಇತರ ಎಲ್ಲಾ ಮಂತ್ರಿಗಳು ಗಳಿಸಿದಂಥ ಸ್ಥಾನ ಕೇವಲ ಒಬ್ಬರಿಂದ ಚುನಾಯಿತರಾದ ಸ್ಥಾನ! ಆದರೆ ಇದು ಸಭೆಯವರೆಲ್ಲರಿಂದ ಚುನಾಯಿತರಾಗಿ ಗಳಿಸಿದಂಥ ಅತಿ ಗೌರವಯುತವಾದ ಸ್ಥಾನ. ಈ ಸ್ಥಾನವನ್ನಲಂಕರಿಸಿ ಅವರು ನಮ್ಮ ದೇಶದ ಕೀರ್ತಿಯನ್ನು ಬೆಳಗಿಸುತ್ತಾರೆ; ನಮ್ಮ ಈ ಸಭೆಯ ಸತ್ಸಂಪ್ರದಾಯಗಳನ್ನು ಬೆಳೆಸಿಕೊಂಡು ಬರುತ್ತಾರೆಂಬ ದೃಢ ನಂಬಿಕೆ ನಮಗಿದೆ. ಅವರು ಅಧ್ಯಕ್ಷಸ್ಥಾನದಲ್ಲಿದ್ದಾಗ ಅವರು ಕೊಡುವ ರೂಲಿಂಗ್ ಆಗಲಿ, ಆಜ್ಞೆಗಳಾಗಲಿ ನದ್ಯಾವನೆ, ಸತ್ಸಂಪ್ರದಾಯಗಳಿಂದ ಕೂಡಿದ್ದಾಗಿ ನಮ್ಮ ದೇಶದ ಬೆಳೆವಣಿಗೆಗೆ ಸಹಕಾರಿಯಾಗುತ್ತವೆಂಬ ಭರವಸೆಯಿಂದ ನಾನು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ). —ಅಧ್ಯಕ್ಷರೇ, ಈ ದಿವಸ ನಮ್ಮ ಈ ಸಭೆ ಉಪಾಧ್ಯಕ್ಷರನ್ನು ಚುನಾಯಿಸುವುದರಲ್ಲಿ ಒಂದು ಒಳ್ಳೆಯ ಸಂಪ್ರದಾಯವನ್ನು ಹಾಕಿದೆಯೆಂಬುದಾಗಿ ಭಾವಿಸಿ ನಾನು ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಎರಡು ಪಕ್ಷಗಳವರೂ ಕೂಡ ಹರಿಜನ ಉಮೇದುವಾರರನ್ನು ಉಮೇದುವಾರರಾಗಿ ಹಾಕಿರುವುದು ಈ ಸಭೆಗೇ ಒಂದು ಭೂಷಣವೆಂದು ನಾನು ತಿಳಿಯುತ್ತೇನೆ. ಈ ರೀತಿಯಾಗಿ ಇತರ ಶಾಸನಸಭೆಗಳಿಗೂ ಕೂಡ ಈ ಸಭೆ ಮಾರ್ಗದರ್ಶಕವಾಗಿರುವ ರೀತಿಯಲ್ಲಿ ನಡೆದುಕೊಂಡಿದೆಯೆಂದು ನಂಬಿದ್ದೇನೆ. ಶ್ರೀಮಾನ್ ಚೆನ್ನಿಗರಾಮಯ್ಯನವರನ್ನು ಅಭಿನಂದಿಸುವುದರಲ್ಲಿ ನಾನು ಮುಖ್ಯವಾಗಿ ನಮ್ಮ ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷನಾಗಿ ನನಗಾಗಿರತಕ್ಕ ಸಂತೋಷವನ್ನು ಈ ಸಭೆಯ ಮೂಲಕವಾಗಿಯೂ ಮತ್ತು ತಮ್ಮ ಮೂಲಕವಾಗಿಯೂ ಅವರಿಗೆ ಸಲ್ಲಿಸುತ್ತೇನೆ. ಶ್ರೀಮಾನ್ ಚೆನ್ನಿಗರಾಮಯ್ಯನವರ ವ್ಯಯಕ್ತಿಕ ಗುಣಗಳನ್ನು ಎಲ್ಲರೂ ಕೊಂಡಾಡಿದ್ದಾರೆ. ಅವರು ಬಹಳ ಸರಳ ಮನುಷ್ಯರು. ಅಷ್ಟು ಸರಳರು ಎಲ್ಲೂ ದೊರೆಯುವುದಿಲ್ಲ. ಅವರೂ ಕೂಡ ಈಗ ದೊರೆತಿರತಕ್ಕ ಪದವಿಯ ವಿಷಯವನ್ನು ಏನಮ್ರ ರೀತಿಯಿಂದ ಮತ್ತು ಸೇವಾ ಭಾವನೆಯಿಂದ ತೆಗೆದುಕೊಂಡರೆಂಬುದನ್ನು ನಾನು ವರ್ಣಿಸಬೇಕಾಗಿಲ್ಲ.

ಇನ್ನು ಹೆಚ್ಚು ಮಾತನಾಡಬೇಕಾದ ಆವಶ್ಯಕತೆಯಿಲ್ಲ. ಅವರು ಈ ಉಪಾಧ್ಯಕ್ಷ ಪದವಿಯಲ್ಲಿ ಈಗ ಸಂಪಾದಿಸಿರುವುದಕ್ಕಿಂತಲೂ ಹೆಚ್ಚಿನ ಕೀರ್ತಿಯನ್ನು ಸಂಪಾದಿಸುವಂತೆ ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ವಿ. ಆರ್. ನಾಯ್ಡುರವರು (ಮಲ್ಲೇಶ್ವರಂ).—ಅಧ್ಯಕ್ಷ ಮಹಾಶಯರೇ, ಎಲ್ಲರೂ ಕೂಡ ನಮ್ಮ ಮಾಜಿ ಸಚಿವರಾದ ಚೆನ್ನಿಗರಾಮಯ್ಯನವರು ಉಪಾಧ್ಯಕ್ಷರಾಗಿ ಚುನಾಯಿತರಾದ ಬಗ್ಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ. ಅವರ ಚುನಾವಣೆಯಿಂದ ದೇಶಕ್ಕೆ ಹರ್ಷವುಂಟಾಗಿದೆಯೆಂದರೆ ತಪ್ಪಾಗಲಾರದು. ಅವರು ತಮ್ಮ 4½ ವರ್ಷಗಳ ಕಾಲದ ಮಂತ್ರಿತ್ವದ ಅವಧಿಯಲ್ಲಿ ದೇಶಕ್ಕೆ ಉತ್ತಮವಾದ ಸೇವೆ ಸಲ್ಲಿಸಿದ್ದಾರೆ. ಇಂಥ ಒಂದು ಸಭೆಯಲ್ಲಿ ಅವರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟಿರುವುದನ್ನು ನೋಡಿದರೆ ಇಡೀ ಜನಕ್ಕೆ ಸಂತೋಷ ಪಡದೆ ಇರದು. ಅವರ ಕಾರ್ಯಕ್ರಮ ಯಶಸ್ವಿಯಾಗಿ ಆಗಲಿ, ದೇವರು ಅವರಿಗೆ ಒಳ್ಳೆಯದನ್ನೂ, ಮಂಗಳವನ್ನೂ ಉಂಟುಮಾಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

*ಶ್ರೀ ವೈ. ಎಂ. ಚಂದ್ರಶೇಖರಯ್ಯನವರು (ಕಡೂರು).—ಅಧ್ಯಕ್ಷರೇ, ಶ್ರೀಮಾನ್ ಚೆನ್ನಿಗರಾಮಯ್ಯನವರು ಇಂದು ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆಯಾದ ವಿಚಾರದಲ್ಲಿ ಪ್ರತಿಯೊಬ್ಬರೂ ಅವರನ್ನು ಹೊಗಳಿದ್ದಾರೆ. ಹೊಗಳುತ್ತಾ ಹೊಗಳುತ್ತಾ ಹೋದರೆ ಬಹಳ ದೊಡ್ಡದಾಗುತ್ತದೆ. ಮಲೆನಾಡಿನವರ ಪರವಾಗಿ ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸಲಿಚ್ಛಿಸುತ್ತೇನೆ.

ಶ್ರೀಮಾನ್ ಚೆನ್ನಿಗರಾಮಯ್ಯನವರು ಮೈಸೂರು ದೇಶಕ್ಕೆ ನಿಮ್ಮ ವರ್ಗದವರ ಪರವಾಗಿ ಮೊದಲನೆಯದಾಗಿ ಮಂತ್ರಿಮಂಡಳದಲ್ಲಿದ್ದವರೆಂದರೆ ತಪ್ಪಲ್ಲ. ಮೈಸೂರಿನ ಚರಿತ್ರೆಯಲ್ಲಿ ನಿಮ್ಮ ತರಗತಿಯವರಾಗಿ ಮಂತ್ರಿವರ್ಯರಾದವರು ಈ ಸಭೆಯ ಉಪಾಧ್ಯಕ್ಷಸ್ಥಾನಕ್ಕೆ ಬಂದಿರುವರಲ್ಲಿ ಇವರೇ ಮೊದಲನೆಯವರೆಂದರೂ ತಪ್ಪಲ್ಲ. ಈ ಸ್ಥಾನ ಮಂತ್ರಿಗಳ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನವೆಂದು ಶ್ರೀಮಾನ್ ಭೀಮಪ್ಪನಾಯಕರೇ ಹೇಳಿದ್ದಾರೆ. ಈ ಸ್ಥಾನದಲ್ಲಿ ಒಂದು ಮಹತ್ವವಿದೆ. ಸಾಧಾರಣವಾಗಿ ಒಬ್ಬ ಮನುಷ್ಯ ತಾಲ್ಲೂಕಾಫೀಸಿಗೆ ಹೋದರೆ ಅಮಲ್ದಾರರನ್ನು ಕಂಡು ಮಾತನಾಡಬೇಕಾದರೆ 'ಸ್ಯಾಮಿ' ಎಂದು ಸಂಬೋಧಿಸುತ್ತಾನೆ. ಅಮಲ್ದಾರರು ಡೆಪ್ಯುಟಿ ಕಮಿಷನರನ್ನು ಮಾತನಾಡಿಸಬೇಕಾದರೆ 'ಸ್ಯಾಮಿ' ಎನ್ನುತ್ತಾರೆ. ಡೆಪ್ಯುಟಿ ಕಮಿಷನರು ಮಂತ್ರಿಗಳನ್ನು ಕಾಣಬೇಕಾದರೆ 'ಸ್ಯಾಮಿ' ಎನ್ನುತ್ತಾರೆ. ಈಗ ಮಂತ್ರಿಗಳಿಂದ 'ಸ್ಯಾಮಿ','ಸ್ಯಾಮಿ' ಎಂದೆನ್ನಿಸಿಕೊಳ್ಳುವ ಸ್ಥಾನ ಇದು. ಇಂಥ ಸ್ಥಾನವನ್ನು ಶ್ರೀಮಾನ್ ಚೆನ್ನಿಗರಾಮಯ್ಯನವರು ಇಂದು ಗಳಿಸಿಕೊಂಡಿದ್ದಾರೆ. ಇವರ ನಾಲ್ಕು ವರ್ಷದ ಅವಧಿಯೊಳಗೆ ಬಹಳ ಚೆನ್ನಾಗಿ ಕೆಲಸ ಕಾರ್ಯಗಳು ಜರುಗುತ್ತವೆಂಬ ಭರವಸೆ ನಮಗಿದೆ. ಅವರು ಹಿಂದೆ ಸ್ಥಳೀಯ ಸಂಸ್ಥೆಗಳ ಸಚಿವರಾಗಿಯೇ ಅಲ್ಲ ವಿದ್ಯಾ ಮಂತ್ರಿಗಳಾಗಿಯೂ ದಕ್ಷತೆಯಿಂದಲೂ ನಿಷ್ಪಕ್ಷಪಾತವಾಗಿಯೂ ಕೆಲಸ ಮಾಡಿದ್ದಾರೆಂದರೆ ತಪ್ಪಾಗಲಾರದು. ಅಂಥವರು ಈ ಸಭೆಯ ಉಪಾಧ್ಯಕ್ಷರಾಗಿ ಒಳ್ಳೆಯ ದಕ್ಷತೆಯಿಂದ ಕೆಲಸಮಾಡುತ್ತಾರೆಂಬುದರಲ್ಲಿ ಯಾವ ಅನುಮಾನವೂ ಇಲ್ಲ. ಈಗ ಸಭೆಯ ಎರೆಲ್ಲರೂ ಅವರನ್ನು ಅಭಿನಂದಿಸಿದ್ದಾರೆ. ನಾನೂ ಕೂಡ ನಮ್ಮ ಮಲೆನಾಡಿನವರ ಪರವಾಗಿ ಅವರನ್ನು ಅಭಿನಂದಿಸುತ್ತೇನೆ.

Mr. SPEAKER—Members of the Assembly, it gives me indeed immense pleasure to associate myself with the sentiments expressed by several Members of this House. Sri R. Chennigaramiah has been in the public field and the political field for nearly quarter of a century. He has been rendering valuable service to the people and the country. His services have been really appreciated by all sections of the public. I know, as a matter of fact, that he is always a level-headed, sober-minded, kind-hearted and well-meaning gentleman. He is always loyal to his colleagues and to his comrades. I have every reason to believe that he will discharge his duties with all responsibility and to the satisfaction of one and all.

I may add one word. I may be permitted to say the Speaker's election this time is the second instance where an Ex-Minister is elected as Speaker of the House in our own State. I understand, subject to correction, that the Deputy Speaker is generally a party-man in England.

With these words, I once again congratulate my esteemed friend, Sri R. Chennigaramiah.

ಶ್ರೀ ಆರ್. ಚೆನ್ನಿಗರಾಮಯ್ಯನವರು (ಕೊರಟಗೆರೆ-ಮಧುಗಿರಿ—ಅನುಸೂಚಿತ ಜಾತಿಗಳು).—ಮಾನ್ಯ ಅಧ್ಯಕ್ಷರೇ, ಈ ದಿನ ಈ ಸಭೆಯಲ್ಲಿ ಮಾನ್ಯ ಸ್ನೇಹಿತರನೇಕರು, ಈ ಹೊತ್ತಿನ ಡೆಪ್ಯುಟಿ ಸ್ಪೀಕರ್ ಚುನಾವಣೆಯಲ್ಲಿ ಪ್ರೀತಿ ವಿಶ್ವಾಸಗಳಿಂದ ನನ್ನನ್ನು ಚುನಾಯಿಸಿ, ಈ ಸಂದರ್ಭದಲ್ಲಿ ಅನೇಕ ಸ್ನೇಹಿತರು ಪ್ರೀತಿ ವಿಶ್ವಾಸದ ಹಿತನುಡಿಗಳನ್ನು ಹೇಳಿದ್ದಾರೆ. ಅನೇಕ ನನ್ನ ಸ್ನೇಹಿತರು, ಮನಃಪೂರ್ವಕವಾಗಿ ತಮ್ಮ ಮನವನ್ನು ಬಿಚ್ಚಿ, ನನ್ನ ಮೇಲೆ ಅವರಿಟ್ಟಿರುವ ಪ್ರೀತಿ ವಿಶ್ವಾಸಗಳನ್ನು ತೋರಿ, ಆಶೀರ್ವಾದ ಪೂರ್ವಕವಾಗಿ ನನ್ನನ್ನು ಹೊಗಳಿದ್ದಾರೆ. ಸರ್ಕಾರದ ಪರವಾಗಿ, ಸಭಾ ನಾಯಕರ ಪರವಾಗಿ ಶ್ರೀಮಾನ್ ಸಿದ್ದಲಿಂಗಯ್ಯನವರು ಮತ್ತು ಎದುರು ಪಕ್ಷದ ನಾಯಕರು ಮತ್ತು ಆ ಸಂಸ್ಥೆಯ ಅಧ್ಯಕ್ಷರೂ, ಹಿಂದಿನ ಮಂತ್ರಿ ಮಂಡಲದಲ್ಲಿ ನನ್ನ ಸಹೋದ್ಯೋಗಿಗಳಾಗಿದ್ದ ಶ್ರೀಮಾನ್ ವಾರಿಯಪ್ಪನವರೂ, ಈ ದಿನ ಸಭಾಪತಿಗಳಾಗಿರುವ ಶ್ರೀಮಾನ್ ಸಿದ್ದಯ್ಯನವರೂ ಇನ್ನೂ ಅನೇಕ ಜನ ಸ್ನೇಹಿತರೂ ನನ್ನ ವಿಚಾರದಲ್ಲಿ ಕೆಲವು ಒಳ್ಳೆಯ ನುಡಿಗಳನ್ನು ಹೇಳಿದ್ದಾರೆ. ಇದು ಭಗವಂತನ ಆಶೀರ್ವಾದ, ಕೃಪೆ. ಅಧಿಕಾರದಲ್ಲಿರುವಾಗ ಸಾಮಾನ್ಯವಾಗಿ ಜನರಿಂದ ಹೊಗಳಿಸಿಕೊಳ್ಳುವುದೇನೂ ಹೆಚ್ಚಿನದ್ದಲ್ಲ. ನಾಲ್ಕೂವರೆ ವರ್ಷಗಳು ಕಳೆದನಂತರ ನಿವೃತ್ತಿಯಾದ ಮೇಲೆ, ಏನೂ ಅಧಿಕಾರವಿಲ್ಲದೇಇರುವಾಗ ಅವರು ಈ ಹಿತನುಡಿಗಳನ್ನು ಹೇಳುವುದು ಅವರ ವಿಶಾಲ ಹೃದಯವನ್ನು ತೋರಿಸುತ್ತದೆ. ಅವರಪ್ರೀತಿ ವಿಶ್ವಾಸಗಳಿಗೂ ಹಿತನುಡಿಗಳಿಗೂ ಅವರಿಗೆ ನಾನು ತುಂಬ ಕೃತಜ್ಞನಾಗಿದ್ದೇನೆ. ಆದರೆ ಅವರು ಹೇಳಿರತಕ್ಕ ಕೆಲವು ಅಂಶಗಳಿಗೆ ನಾನು ಅರ್ಹನೋ ಅಲ್ಲವೋ ಎಂಬುದನ್ನು ನಾನು ಯೋಚನೆಮಾಡಬೇಕಾಗಿದೆ.

ನಾನು ಅರ್ಹನಲ್ಲ. ಹೆಚ್ಚಿನ ಹೊಗಳಿಕೆಗಾಗಿ ಹೇಳಿದ್ದಾರೆಂದು ನಾನು ಹೇಳಿದರೆ ಅವರು ಏನೊಂದು ಪ್ರೀತಿ ವಿಶ್ವಾಸದಿಂದ ಹೇಳಿದರೋ ಅದನ್ನು ನಿರಾಕರಿಸಿದ ಹಾಗಾಗುತ್ತದೆ. ಆದಕಾರಣ ನಾನು ಹಾಗೆ ಹೇಳುವುದಿಲ್ಲ. ಅವರು ಹೇಳಿದ ಹಿತ ನುಡಿಗಳನ್ನು ನಾನು ಆಶೀರ್ವಾದವೆಂದು ತೆಗೆದುಕೊಳ್ಳುತ್ತೇನೆ. ಈ ಅಧಿಕಾರಗಳು ಯಾರಿಗೂ ಶಾಶ್ವತವಾಗಿರುವುದಿಲ್ಲ ನಾನು ಮಂತ್ರಿಯಾಗುತ್ತೇನೆಂದು ಸ್ವಪ್ನದಲ್ಲಿಯೂ ಇರಲಿಲ್ಲ. ಮಂತ್ರಿ ಸ್ಥಾನದಿಂದ ನಿವೃತ್ತಿಯಾದ ಮೇಲೆ ಈ ಸಭೆಯ ಡೆಪ್ಯುಟಿ ಸ್ಪೀಕರ್ ಆಗುತ್ತೇನೆಂದು ಕೂಡ ನನಗೆ ಸ್ವಪ್ನದಲ್ಲಿಯೂ ಇರಲಿಲ್ಲ. ಇದು ಭಗವಂತನ ಇಚ್ಛೆ. ಯಾವ ಯಾವ ಕಾಲದಲ್ಲಿ ಯಾವ ಯಾವ ಕ್ಷೇತ್ರದಲ್ಲಿ ಸೇವೆಮಾಡುವುದಕ್ಕೆ ನಮ್ಮನ್ನು ನೇಮಕಮಾಡುತ್ತಾನೋ ಅದರಂತೆ ನಾವು ಮಾಡಬೇಕಾಗುತ್ತದೆ. ಜನ್ಮ ತಾಳಿದಾಗ ಮಂತ್ರಿಪದವಿಯಾಗಲಿ, ಸದಸ್ಯರ ಪದವಿಯಾಗಲಿ, ಡೆಪ್ಯುಟಿ ಸ್ಪೀಕರ್ ಪದವಿಯಾಗಲಿ ಇರಲಿಲ್ಲ, ಗಳಿಸಿಕೊಂಡು ಬಂದಿರಲಿಲ್ಲ. ಜನ್ಮ ತಾಳಿದ ಮೇಲೆ ಭಗವಂತನ ಇಚ್ಛೆಯ ಪ್ರಕಾರ ಯಾವ ಯಾವ ಕೆಲಸವನ್ನು ಮಾಡಬೇಕೋ ಅದನ್ನು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ಅವನ ಇಚ್ಛೆಯ ಪ್ರಕಾರ ಕೆಲಸಮಾಡುವಾಗ ಮನುಷ್ಯ ಮಾತ್ರದವರು ಮಾಡುವ ಕೆಲಸದಲ್ಲಿ, ಅದರಲ್ಲಿಯೂ ಮುಖ್ಯ ಅಧಿಕಾರಗಳಲ್ಲಿರುವಾಗ ಎಲ್ಲರಿಗೂ ತೃಪ್ತಿಯಾಗುವಂತೆ ಮಾಡುವುದು ಕಷ್ಟ. ಸಾಮಾನ್ಯವಾಗಿ ನಮಗೇ ಗೊತ್ತಿಲ್ಲದಂತೆ ಅನೇಕ ತಪ್ಪುಗಳನ್ನು ಮಾಡಬಹುದು. ಆದರೆ ಸಾಧ್ಯವಾದಷ್ಟು ಮಟ್ಟಿಗೂ ನ್ಯಾಯವನ್ನು ಅರಿತು, ಧರ್ಮದ ದಾರಿಯಲ್ಲಿ ಹೋಗಬೇಕೆಂಬ ಒಂದು ಆಕಾಂಕ್ಷೆಯಿಂದ ನಾನು ನಡೆದು ಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೇನೆಂದು ಮಾತ್ರ ಹೇಳಬಲ್ಲೆ. ನನಗೆ ಒಂದು ವಿಚಾರ ಪ್ರತಿ ಸಾರಿಯೂ ಜ್ಞಾಪಕಕ್ಕೆ ಬರುತ್ತಿತ್ತು. ಮಹಾತ್ಮಾ ಗಾಂಧಿಯವರು ಹರಿಜನ ಸೇವಾ ಸಂಘ ಎಂದು ಒಂದು ಸಂಸ್ಥೆಯನ್ನು ಮಾಡಿದಾಗ ಆ ಸಂಸ್ಥೆಯ ಅಧ್ಯಕ್ಷರಾಗಿ ಜಿ. ಡಿ. ಬಿರ್ಲಾರವರನ್ನು ನೇಮಕಮಾಡುವಾಗ ಮಹಾತ್ಮಾ ಗಾಂಧಿಯವರು ಒಂದು ಮಾತು ಹೇಳಿದರು. ಹರಿಜನರ ಸಮಸ್ಯೆ ದೇಶದಲ್ಲಿ ಒಂದು ದೊಡ್ಡ ಸಮಸ್ಯೆ, ದೇಶದ ದೀನದಲಿತರ ಸೇವೆ ಮಾಡುವುದು ಒಂದು ದೊಡ್ಡ ಸೇವೆ, ಶ್ರೀರಾಮಚಂದ್ರನಿಗೆ ಹೋದ ಮೇಲೆ ಭರತ ರಾಜ್ಯವನ್ನಾಳುವಾಗ ಶ್ರೀರಾಮನ ಪಾದರಕ್ಷೆಗಳನ್ನು ಸಿಂಹಾಸನದ ಮೇಲಿಟ್ಟು ಭಯ ಭಕ್ತಿಯಿಂದ ರಾಜ್ಯವಾಳುತ್ತಿದ್ದನು. ಹಾಗೆ ನಿಮ್ಮನ್ನು ಹರಿಜನ ಸೇವಕ ಸಂಘಕ್ಕೆ ಅಧ್ಯಕ್ಷರಾಗಿ ನೇಮಕಮಾಡಿದ್ದೇನೆ, ದೇಶದಲ್ಲಿ ಎಷ್ಟೋ ಹರಿಜನರು ಅಧೋಗತಿಯಲ್ಲಿದ್ದಾರೆ, ದೇಶಸೇವೆಯೇ ಈಶಸೇವೆಯೆಂದು ತಿಳಿದು ಭರತನಂತೆ ನೀವು ಸೇವೆ ಮಾಡಬೇಕೆಂದು ಹೇಳಿದರಂತೆ. ಮಹಾತ್ಮಾ ಗಾಂಧಿಯವರು ಬಿರ್ಲಾರವರಿಗೆ ಹೇಳಿದ ಮಾತು ನನಗೆ ಸದಾ ಜ್ಞಾಪಕಕ್ಕೆ ಬರುತ್ತಿತ್ತು. ನಾನು ಆಫೀಸಿಗೆ ಹೋಗುವಾಗ ಅದೇರೀತಿ ಪ್ರತಿದಿನವೂ ಜ್ಞಾಪಕದಲ್ಲಿಟ್ಟುಕೊಂಡು ನಡೆಯುತ್ತೇನೆ. ಈ ಅಧಿಕಾರ ನಮ್ಮ ತಾತ ಮುತ್ತಾತಂದಿರು ಕೊಟ್ಟ ಆಸ್ತಿಯಲ್ಲ. ಇದು ದೇಶಕ್ಕೆ ಸೇರಿದುದು. ಆದ್ದರಿಂದ ಸ್ವೇಚ್ಛೆಯಾಗಿ ಅಧಿಕಾರ ನಡೆಸಬಾರದು. ನ್ಯಾಯದಿಂದ ನಡೆಯಬೇಕೆಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ನಡೆಯಲು ಪ್ರಯತ್ನಿಸಿದ್ದೇನೆ. ಅನೇಕಸಂದರ್ಭಗಳಲ್ಲಿ ಕೆಲವರಿಗೆ ಅಸಮಾಧಾನವಾಗಿರಬಹುದು, ಅತೃಪ್ತಿಯಾಗಿರಬಹುದು. ಮೊದಲೇ ನಾನು ಹೇಳಿದಂತೆ ಎಲ್ಲರಿಗೂ ಸಮಾಧಾನವಾಗುವಂತೆ ಮಾಡುವುದು ಬಹಳ ಕಷ್ಟ. ಒಂದು ವೇಳೆ ನಾನು ತಪ್ಪು ಮಾಡಿದ್ದರೂ ಅದೆಲ್ಲವನ್ನೂ ಕ್ಷಮಿಸಿ, ಹಿತನುಡಿಗಳನ್ನು ನುಡಿದು ನನಗೆ ಉತ್ತೇಜನ ಕೊಟ್ಟಿದ್ದಾರೆ. ಮಂತ್ರಿ ಸ್ಥಾನ ಹೋದಮೇಲೆ ಕೇವಲ ದುರಾಸೆಯಿಂದ ಅಥವಾ ಅಧಿಕಾರ ಲಾಲಸೆಯಿಂದ ಈ ಡೆಪ್ಯುಟಿ ಸ್ಪೀಕರ್ ಅಧಿಕಾರವನ್ನು ನಾನು ಒಪ್ಪಿಕೊಂಡಿಲ್ಲವೆಂದು ಮನ ಬಿಚ್ಚಿ ಹೇಳಬೇಕಾಗಿದೆ. ಯಾವುದಾದರೂ ರೀತಿಯಲ್ಲಿ ದೇಶ ಸೇವೆ ಮಾಡಬೇಕು. ಇದೂ ಒಂದು ಸೇವಾಕ್ಷೇತ್ರ, ಇದರಲ್ಲೇನೂ ಅವಮಾನವಿಲ್ಲ. ಅವರು ಹೇಳಿದ ಹಾಗೆ ಸಭೆಯಲ್ಲಿ ಡೆಪ್ಯುಟಿ ಸ್ಪೀಕರ್, ಸ್ಪೀಕರ್ ಎಂದು ವ್ಯತ್ಯಾಸಮಾಡುವ ಹಾಗಿಲ್ಲ. ಇದೇನೂ ಕಡಮೆ ದರ್ಜೆಯಲ್ಲ. ಈ ಸ್ಥಾನವನ್ನು ನಾನು ಒಪ್ಪಿಕೊಳ್ಳಬೇಕೆಂದು ಕೆಲವು ಸ್ನೇಹಿತರು ಒತ್ತಾಯಮಾಡುತ್ತಿದ್ದರು. ನಾನಾದರೂ ಸೇವೆಮಾಡುವುದರಲ್ಲಿ ಕಡಮೆ ಸ್ಥಾನ ದೊಡ್ಡ ಸ್ಥಾನ ಎಂದು ವ್ಯತ್ಯಾಸಮಾಡಿಲ್ಲ. ಸಾಮಾನ್ಯವಾಗಿ ನುಳ್ಳು ಹೇಳಿದೆ, ಯಾರಿಗೂ ಅನ್ಯಾಯಮಾಡದೆ, ಸೇವಾ ಕ್ಷೇತ್ರದಲ್ಲಿ ಕೆಲಸ ಮಾಡುವಾಗ ಹೆಚ್ಚು ಕಡಮೆ ಎಂದು ವ್ಯತ್ಯಾಸಮಾಡದೆ ಸೇವೆಮಾಡಬೇಕು. ಆದಕಾರಣ ನಮ್ಮ ಸ್ನೇಹಿತರ ಅಭಿಪ್ರಾಯದಂತೆ ಒಪ್ಪಿಕೊಂಡು ತಾವು ಪ್ರೀತಿ ವಿಶ್ವಾಸಗಳಿಂದ ನನ್ನನ್ನು ಹುನಾಯಿಸಿದ್ದೀರಿ. ಆಶೀರ್ವಾದ ರೂಪವಾಗಿ ಹೇಳಿರುವ ತಮ್ಮ ಹಿತನುಡಿಗಳನ್ನು ಸಾರ್ಥಕ ಪಡಿಸುವುದಕ್ಕೆ ಪ್ರಯತ್ನ ಪಡುತ್ತೇನೆ.

ಕೆಲವು ನನ್ನ ಸ್ನೇಹಿತರಲ್ಲಿ ಒಂದು ಶಂಕೆಮೂಡಿದೆ. ಯಾವಾಗಲಾದರೂ ಅಧ್ಯಕ್ಷ ಸ್ಥಾನ ವಹಿಸಿದರೆ ಸರ್ವ ಪಕ್ಷದವರಿಗೂ ನಿಷ್ಪಕ್ಷಪಾತದಿಂದ ನಡೆಯಬೇಕೆಂದು ಹೇಳಿದರು. ಅವರು ಹೇಳಿರುವ ಬುದ್ಧಿವಾದವನ್ನು ಸದಾ ಮನಸ್ಸಿನಲ್ಲಿಟ್ಟುಕೊಳ್ಳುತ್ತೇನೆ. ಆ ರೀತಿ ವ್ಯತ್ಯಾಸವಾಡುವುದಕ್ಕೆ ಈ ಸಭೆಯ ಅಧ್ಯಕ್ಷರಾರೇ ಆಗಿರಲಿ, ಅವಕಾಶವೇ ಇಲ್ಲ. ಒಂದುವೇಳೆ ಅಂಥ ಮನೋಭಾವವಿದ್ದರೆ ಅಂಥವರು ಆ ಸ್ಥಾನಕ್ಕೆ ಹೋಗುವುದಕ್ಕೆ ಒಪ್ಪಿಕೊಳ್ಳಬಾರದು. ಆ ಸ್ಥಾನದಲ್ಲಿ ಕುಳಿತ ಮೇಲೆ ಈ ಸಭೆಯ ಅಧ್ಯಕ್ಷರು ಎಲ್ಲರಿಗೂ ಸೇರಿದವರೇ ಹೊರತು ಒಂದು ಪಕ್ಷದ ಅಧ್ಯಕ್ಷರಲ್ಲ. ಸಭಾಧ್ಯಕ್ಷನೆಂದು ಹೆಸರನ್ನು ಗಳಿಸಿದ ಮೇಲೆ ಎಲ್ಲರಿಗೂ ನ್ಯಾಯವನ್ನು ದೊರಕಿಸಿ ಕೊಡಬೇಕೆಂಬ ತತ್ವವನ್ನು ಸ್ವಲ್ಪ ಮಟ್ಟಿಗೆ ತಿಳಿದುಕೊಂಡಿದ್ದೇನೆ. ಇನ್ನೂ ತಿಳಿದುಕೊಳ್ಳಬೇಕಾದರೆ ಅದನ್ನೂ ತಿಳಿದುಕೊಂಡು ಸರ್ವಪಕ್ಷದವರಿಗೂ ಒಂದೇ ಸಮಾನಾದ ತೀರ್ಮಾನಕೊಡಬೇಕೆಂಬ ಉದ್ದೇಶದಿಂದ ಕೂಡಿರುತ್ತೇನೆ. ಇದೇ ರೀತಿ ದೇವರು ನನಗೆ ಶಕ್ತಿ ಕೊಡಲಿ, ಉದಾರವಾದ ಮನಸ್ಸು ಕೊಡಲಿ ಎಂದು ಪ್ರಾರ್ಥಿಸಿ ಮತ್ತೊಮ್ಮೆ ಎಲ್ಲರಿಗೂ ನನ್ನ ಕೃತಜ್ಞತೆಯನ್ನರ್ಪಿಸುತ್ತೇನೆ.

Mr. SPEAKER. - The House will now adjourn and will meet to-morrow at 12 Noon.

The House adjourned at Fifty Minutes past Five of the Clock to meet again at Twelve of the Clock on Wednesday, 2nd July 1952.

———

WD 2802—GPB—500—7-10-52.